# ನವಿಲುಗನ್ನಡಿ

- ಮಾರ್ಚ್ ಸಂಚಿಕೆಯಲ್ಲಿ ಗಂಗಾಧರ ಚಿತ್ತಾಲ ಶತಮಾನ ಪ್ರಯುಕ್ತ ಪ್ರಕಟವಾದ ಎರಡು ವಿಮರ್ಶಾ ಲೇಖನಗಳು ಮೌಲಿಕವಾಗಿವೆ. ಜಗದ ಜಂಜಡದ ನಡುವೆ ನಾವು ಮರೆತ ಅನನ್ಯ ಕವಿಯನ್ನು ಮರಳಿ ನೆನಪಿಸಿದ್ದಕ್ಕೆ ವಂದನೆ. ಪಾರ್ಕಿನ್ಸನ್ ದೆಸೆಯಿಂದಾಗಿ ಅವರು ಪಟ್ಟ ಪಾಡಿನಲ್ಲೂ ಕಮರದ ಜೀವನೋತ್ಸಾಹದ ಬಗ್ಗೆ ದಿ. ಡಾ. ಹಾಮಾನಾ 'ಸುಧಾ'ದಲ್ಲಿ ಬರೆದ ಲೇಖನ ಇನ್ನೂ ನೆನಪಿದೆ. ಅವರ 'ಮಹಾತ್ಮಾ' ಕವಿತೆ ಓದಿ ಖುಷಿಯಾಯಿತು. ಇದನ್ನು 90ರಲ್ಲಿ ಕನ್ನಡ ಭಾರತಿ 10 ಪಠ್ಯಪುಸ್ತಕಕ್ಕೆ ಆಯ್ಕೆ ಮಾಡಲಾಗಿತ್ತು.

  **ಡಾ ಮಹಾಬಲೇಶ್ವರ ರಾವ್, ಉಡುಪಿ**

- ಗಂಗಾಧರ ಚಿತ್ತಾಲರ 'ಹಾಲು' ಕವನದಲ್ಲಿ ಅವರ ಸಮಗ್ರ ಕಾವ್ಯದ ಸಮಗ್ರ ಕಾಳಜಿ ಕೆನೆಗಟ್ಟಿದಂತಿದೆ.

  **ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**

- ಎಚ್. ಡುಂಡಿರಾಜ್ ಅವರ ಕವನದಿಂದ (ಪರಿಚಯ) ಮಾರ್ಚ್ ಸಂಚಿಕೆ ಶ್ರೀಮಂತವಾಗಿದೆ. ಕೇಶವರೆಡ್ಡಿ ಹಂದ್ರಾಳರು 'ಆಜಾವೊ ಚಂದ್ರಮ'ದಲ್ಲಿ ಚಂದ್ರಮಳನ್ನು ಆಪ್ತವಾಗಿಸಿದ್ದಾರೆ.


  **ತಲಕಾಡು ಶ್ರೀನಿಧಿ, ಬೆಂಗಳೂರು**

- 'ಲಿಂಗಾಯತ ಖಾನಾವಳಿ' ಕಥೆ ಶೀರ್ಷಿಕೆಯಿಂದಲೇ ಆಕರ್ಷಿಸಿತು. ಕಥಾವಸ್ತು ಮನ ಕಲಕಿತು. 'ಆಜಾವೊ ಚಂದ್ರಮ' ಕಥೆಯಲ್ಲಿನ ಮನುಷ್ಯ ದೇಹದ ಕುರಿತು ವೈಜ್ಞಾನಿಕ ವಿವರಗಳು ಅಚ್ಚರಿ ಮೂಡಿಸಿದವು. ಭಾವನೆಗಳು ವಿಶಿಷ್ಟ ರೀತಿಯಲ್ಲಿ ಗರಿಗೆದರಿವೆ.

  **ಹೆಗ್ಗಾಪುರ ರಾಘವೇಂದ್ರ ಕುಲಕರ್ಣಿ**

- 'ಆಜಾವೊ ಚಂದ್ರಮ' ಕಥೆ ಆಸ್ಪತ್ರೆಗಳ ನಿಜ ಚಿತ್ರವನ್ನು ಧ್ವನಿಸಿದೆ. ಆಸ್ಪತ್ರೆಯಿಂದ ತಪ್ಪಿಸಿಕೊಂಡು ಓಡಿ ಹೋಗೋಣ ಎಂದಾಗ ಚಂದ್ರಮ ಇಹವನ್ನೇ ತೊರೆದದ್ದು ಮಾತ್ರ ಕಣ್ಣು ಹಸಿಯಾಯಿತು.

  **ಗಣಪತಿ ಶಿ. ಗಲಗಲಿ, ಹುಲ್ಯಾಳ**




- '#ಹ್ಯಾಂಗ್‌ಪ್ರೊಫೆಸರ್‌ಆರ್‌ಕೆ' (ಗೌತಮ ಜ್ಯೋತ್ಸ್ನಾ) ಒಂದು ಕಥೆಯಂತೆ ಕಾಣದೇ ದೃಷ್ಟಾಂತದಂತೆ ಕಂಡಿತು. ಹೊಸ ಕಥಾವಸ್ತು, ಹೊಸ ವಿಚಾರ, ಹೊಸ ತಂತ್ರಗಾರಿಕೆ ಚೆನ್ನಾಗಿದೆ.

  **ಶಂಕರನಾರಾಯಣ ಭಟ್, ಹೊನ್ನಾವರ**

- ಲಿಂಗಾಯತ ಖಾನಾವಳಿ (ಅನಿಲ್ ಗುನ್ನಾಪೂರ) ಉತ್ತರ ಕರ್ನಾಟಕದಲ್ಲಿ ನಶಿಸಿಹೋಗುತ್ತಿರುವ ಖಾನಾವಳಿ ಕುರಿತು ಮತ್ತೆ ಮೆಲುಕು ಹಾಕುವಂತೆ ಮಾಡಿತು. ಅಪರೂಪದ ಪ್ರಸಂಗ ಕಥೆಯಲ್ಲಿ ಮನಮುಟ್ಟುವಂತೆ ನಿರೂಪಿತವಾಗಿದೆ.

  **ಸಿ.ಕೆ.ಗಣಪ್ಪನವರ ಡಂಬಳ, ಮುಂಡರಗಿ**

- 'ಲಿಂಗಾಯತ ಖಾನಾವಳಿ' ಕಥೆ ಸೊಗಸಾಗಿ ಮೂಡಿಬಂದಿದೆ. ಕಾಲ ಯಾವುದೇ ಇರಲಿ, ಯಾವಾಗಲಾದರೂ ನಿಸ್ವಾರ್ಥ, ನ್ಯಾಯ ಮತ್ತು ನೀತಿಗೆ ಜಯ ಸಿಕ್ಕೇ ಸಿಗುತ್ತದೆ ಎಂಬುದಕ್ಕೆ ಈ ಕಥೆಯೇ ಸಾಕ್ಷಿ.

  **ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ**

- ಕೊನೆಪುಟದ ಅಭಿಷೇಕ್ ಬಳೆ ಅವರ ಕವಿತೆ ಇಷ್ಟವಾಯಿತು. ಕವಿತೆಯ ಕೊನೆಯ ಸಾಲಿನ ಸ್ಫೋಟಕತ್ವವು ಪರಿಣಾಮಕಾರಿಯಾಗಿ ಸಹೃದಯರ ಭಾವಾಭಿವ್ಯಕ್ತಿಯನ್ನು ಉದ್ದೀಪನಗೊಳಿಸಿತು.

  **ಕನಕಪ್ಪ ವಾಗನಗೇರಿ**

  **ಶೇಖರ ಕರಡಿ ಸುರಪುರ**